Dde-354
T.P-2.1

51st Year of Publication ✯ SATYAVADI Daily, MYSORE 4

Reg No B G 155 21-7-1968

ಸಮುಚಿತ ತರ್ಕಬದ್ಧ ಮಾಸಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ

ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೆಯವಚ್ಚ ಸೇರಿ ವರ್ಷಕ್ಕೆ ರೂ 16-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 6

ಸತ್ಯವಾದಿ

Space available

For Permanent Advertisement

ಸ್ಥಾಪಕರು : ತರುಣ ಸಂಸ್ಥಾಪಕರಾದ ಎಂ. ಎ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಅಮೇರಿಕಾದ ವಿದೇಶೀ ನೆರವಿನಲ್ಲಿ ಖೋತಾ

ತಾಜಾ ಸಮಾಚಾರ

ನವದೆಹಲಿ— ರಾಜಕೀಯ ಕಾರಣಗಳಿಗೆ ಡಾನೇರ್ಷ್ ಕೊಡುಮದನ್ನು ಪ್ರತಿಬಂಧಿಸುವ ಶಾಸನ ಮಾಡಲಾಗುವುದು.

ಬೆಂಗಳೂರು— ನಿನ್ನೆ ನಡೆದ ಕುದುರೆ ಜೂಜಿನಲ್ಲಿ ಜಾಕ್‌ಪಾಟ್‌ಪೂಲ್‌ನಲ್ಲಿ ಒಂದು ಟಿಕೀಟಿಗೆ ರೂ. 16516 ದೊರೆತಿತ್ತು.

ಬೆಂಗಳೂರು— ಬೀದರ್ ಜಿಲ್ಲೆಯಲ್ಲಿಯ ದುಸ್ಥಿತಿ ವಿವರಿಸಿ ಅಲ್ಲಿಯ ಶಾಸಕರು ಮುಖ್ಯಮಂತ್ರಿಯರಿಗೆ ಮನವಿ ಅರ್ಪಿಸಿ, ಅದನ್ನು ಕ್ಷಾಮಪೀಡಿತ ಪ್ರದೇಶವೆಂದು ಸಾರಲು ಕೋರಿದಾರೆ — ತೀವ್ರ ನೀರಿನ ಅಭಾವಕ್ಕಾಗಿ ಜನರು ಪಕ್ಕದ ಆಂಧ್ರ ಪ್ರದೇಶಕ್ಕೆ ಹೋಗುತ್ತಿರುವರೆಂದು ಹೇಳಲಾಗಿದೆ — ಮೇವಿನ ಬೆಲೆ ರೂ. 100 ರಿಂದ ರೂ. 500 ಕ್ಕೆ ಏರಿಕೆ.

ಸತ್ಯವಾದಿ ”ಯ ಸ್ವರ್ಣೋತ್ಸವ

“ಸತ್ಯವಾದಿ” ಯ ಸ್ವರ್ಣೋತ್ಸವವನ್ನು ಜುಲೈ 28 ರಂದು ನೆರವೇರಿಸಲಾಗುವುದು.

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶೆನ್ಯಾರವರು, ಶ್ರೀ ಎಂ. ಬಿ. ಬಸವಯ್ಯನವರು, ಆಪೆರಾ ಟಾಕೀಸಿನವರು, ಪದ್ಮಭೂಷಣ ನೇಪ್ರದಾನಿ ಡಾ|| ಎಂ.ಸಿ. ಮೋದಿಯವರು ಡಾ || ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಗೊ) ಯವರು ಶುಭಾಶಯಡೊಡನೆ ನೆರವು ನೀಡಿರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಹುತ್ತು ಮೈಸೂರು ರಾಜ್ಯದಲ್ಲಿ ನಡೆದಂತೆ ಅದೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀಡಿ ಸಹಕರಿಸಬೇಕಾಗಿ ವಿನಂತಿಸಿ, ಈಡೇರುವೆವೆಂದು ಆಶಿಸಿ, ಕೃತಜ್ಞತಾಪೂರ್ವನಂದಿಸುತ್ತೇವೆ.

ಸಂಪಾದಕ ‘ ಸತ್ಯವಾದಿ ’

ಚಾಮರಾಜಪುರಂ, ಮೈಸೂರು 4.

ಭಾರತಕ್ಕೆ ಅಮೇರಿಕಾ ಸಾಲಾ

ನವದೆಹಲಿ— ರಸಾಯನಿಕ ಗೊಬ್ಬರ ಆಮದುಮಾಡಿಕೊಳ್ಳಲು ಭಾರತಕ್ಕೆ 23 ಮಿಲಿಯ ಡಾಲರು ಸಾಲಾ ಬಗ್ಗೆ ಒಪ್ಪಂದ ರುಜುವಾಯಿತು.

●

ಖಾಟತಿ

ಬೆಂಗಳೂರು— ಖಾಟತಿ ನಡೆಸುವ ವಿಚಾರದ ಸ್ಕೀಮನ್ನು ಸರಕಾರ ಪರ್ಯಾಲೋಚಿಸುತ್ತಿರುವದೆಂದು ವರದಿಯಾಗಿದೆ.

✯

ಪುರಾತನ ನಾಣ್ಯಗಳು

ಹಂಕಾಂಗ್— ಷಿನೋರೀ, ಹಾಕೋಡಾಟೆ ತೀರದಲ್ಲಿ ರಸ್ತೆ ಹಾಳಲು ರಸ್ತೆ ಹಾಕಲು ಬುಲ್‌ಡೋಜರಿಂದ ಕೆತ್ತುತ್ತಿದ್ದಾಗ ಒಂದುವರೆ ಟನ್‌ನಷ್ಟು 3000 ಪುರಾತನ ತಾಂಬ್ರದ ನಾಣ್ಯಗಳು ತುಂಬಿದ್ದ ಎರಡು ಮಡಿಕೆಗಳು ಸಿಕ್ಕಿದವು.

✯

ವಿದೇಶೀ ಗೋಧಿ

ನವದೆಹಲಿ— 3 ವರ್ಷಗಳ ನಂತರ ಗೋಧಿ ಆಮದು ಇಲ್ಲವೆಂದು ಪ್ರಧಾನಿ ಇಂದಿರಾರವರು ಹೇಳಿರುವರು.

ರಾಜರ ತೀರ್ಮಾನ

ಬೊಂಬಾಯಿ— ನಾಜಿ ರಾಜರಿಗೆ ತಿರೆಯುತ್ತಿರುವರಾಜಧನ ಮತ್ತು ಇತರ ರಿಯಾಯಿತಿಗಳ ಬಗ್ಗೆ ಸರಕಾರದ ವಚನ ಬದ್ಧತೆಯಂತೆ ಸರಕಾರ ವರ್ತಿಸಬೇಕೆಂದು ರಾಜರ ಸಭೆ ತನ್ನ ನಿಲುವನ್ನು ಹುತ್ತೆ ಹೃಕ್ಕ ಪಡಿಸಿತು.

✯

ಭಾರತಕ್ಕೆ ಚಿನ್ನದ ಪದಕ

ಅಹಮದಾಬಾದ್— ಮಾಸ್ಕೋ ಒಲಂಪಿಕ್ ಕಮಿಟಿಯ ಪ್ರಪ್ರಥಮ ಚಿನ್ನದ ಪದಕವು ಭಾರತದ ನೃತ್ಯದಲ್ಲಿ ಖ್ಯಾತರಾದ ಶ್ರೀಮತಿ ಮೃಣಾಲಿನಿ ಸಹಭ್ಯಾರಿಗೆ ದೊರೆತಿದೆ.

✯

ಆಕ್ಕಿ ವಶ

ಕಾರವಾರ— ಸುಮಾರು 1.5 ಲಕ್ಷ ಬೆಲೆಯ 825 ಕ್ವಿಂಟಾಲ್ ಆಕ್ಕಿ 455 ಕ್ವಿಂಟಾಲ್ ನುಚ್ಚು, 165 ಕ್ವಿಂಟಾಲು ಭತ್ತ ಈ ವಾರದಲ್ಲಿ ಪಶಪಡಿಸಿಕೊಳ್ಳಲಾಯಿತು.

✯

ಬಂಧನ

ಕೊಚ್ಚಿ— ಜಿಲ್ಲಾ ಕಲೆಕ್ಟರು ಆಫೀಸನ್ನು ಪಿಕೆಟ್ ಮಾಡಿದ 140 ಕೈಗಾರಿಕಾ ಕೆಲಸಗಾರರು ಬಂಧಿಸಲ್ಪಟ್ಟರು.

✯

ಮುಸಕಿನಜೋಳ ವಶ

ತರೀಕೆರೆ— ಒಂದು ಲಾರಿಯಿಂದ 25 ಕ್ವಿಂಟಾಲ್ ಮುಸಕಿನಜೋಳವನ್ನು ಮಂಗಳಸಾರ ವಶಪಡಿಸಿಕೊಳ್ಳಲಾಯಿತು — ಒಂದು ಲಾರಿಯಿಂದ 10 ಕ್ವಿಂಟಾಲ್ ಮುಸಕಿನಜೋಳವನ್ನು ಬುಧವಾರ ವಶಪಡಿಸಿಕೊಳ್ಳಲಾಯಿತು.

ಭಾರತಕ್ಕೂ ಸಂಬಂಧಪಟ್ಟದೆ

ವಾಷಿಂಗ್ಟನ್— ಅಧ್ಯಕ್ಷ ಜಾರ್ಜ್ ವಿದೇಶೀ ನೆರವಿನ ಅಧಿಕಾರದ ಬಗ್ಗೆ ವಿನಂತಿಯಲ್ಲಿ 1 ಬಿಲಿಯ ಡಾಲರನ್ನು ಪ್ರತಿನಿಧಿ ಸಭೆ ಖೋತಾಮಾಡಿದೆ.

●

ಗೌರ್ನರು ಲಾಟರಿ ಟೀಕೀಟು ಕೊಂಡರು

ಚಂಡೀಘರ್— ಪಂಜಾಬು ಲಾಟರಿ ಸ್ಕೀಂ ಉದ್ಘಾಟನೆಗೊಂಡ ಗುರುತಿಗಾಗಿ ಗೌರ್ನರ್ ಡಾ || ಪವಟಿಯವರು ಅರ್ಧ ಸಚಿವರಿಂದ ಒಂದು ಟಿಕೀಟು ಕೊಂಡು ಕೊಂಡರು.

✯

ಹುಡುಗನ ‘ ದತ್ತು ”

ಕಲ್ಲೀಕೋಟೆ— ಈ ಜಿಲ್ಲೆಯ ಪೂನೂರಿನಲ್ಲಿ ಈ ತಿಂಗಳು 1 ನೇ ತಾರೀಖು ಭೂಮಿ ಕುಸಿತದಲ್ಲಿ ಸಿಕ್ಕಿ ಸತ್ತ ತಂದೆ ತಾಯಿಗಳ ಪುತ್ರ 6 ವರ್ಷದ ವಿಜಯ್ಕುಮಾರ್ ಎಂಬ ಹುಡುಗನನ್ನು ಇಲ್ಲಿಯ ರೋಟರಿ ಕ್ಲಬ್ “ ದತ್ತು ” ಮಾಡಿಕೊಂಡಿತು.

✯

ಚಂಡೀಘರ— ಮುಂದಿನ ಏಷ್ಯಾಡ್ ಹಾಕಿ ಪಂಥವು ಅಕ್ಟೋಬರು 31 ರಿಂದ ನವೆಂಬರು 10 ತನಕ ನಡೆಯುವುದು.

✯

ಬೆಂಗಳೂರು— ಬೆಂಗಳೂರು ಡೈರಿಯ 150 ನೌಕರರು ಡೈರಕ್ಟರರ ಉದ್ದಟನ ಕಾರ್ಯವನ್ನು ಪ್ರತಿಭಟಿಸಿ ನಿನ್ನೆ ಮುದ್ಯಾಹ್ನ ಹೊಣ್ಣುರಿಸಿದರು.

✯

ಅಲಹಾಬಾದು— ವಿಶ್ವವಿದ್ಯಾನಿಯದ ಕೌನ್ಸಿಲ್ಲಿಗೆ ವಿಭಾಗಾಧಿಕಾರಿಯವರನ್ನು ನಾಮಕರಣಮಾಡಿದ್ದನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಪ್ರತಿಭಟಿಸಿ ಸಂಬಂಧವಾಗಿ ಇಬ್ಬರು ವಿದ್ಯಾರ್ಥಿ ನಾಯಕರು ಬಂಧಿಸಲ್ಪಟ್ಟರು.

ಹಿಂದೂಗಳ ಆಚಾರ

ಸಂಗ್ರಾಹಕರು— " ಶಾಸ್ತ್ರಧರ್ಮನಿರತ " ಆನಂತನರಸಿಂಹಯ್ಯಂಗಾರ್

(ಮುಂದುನರಿದುದು)

ಪ್ರಾಚೀನ ಕಾಲದಿಂದಲೂ ಹಿಂದೂ ಸಮಾಜವನ್ನು ವೃತ್ತಿಗನುಗುಣವಾಗಿ ನಾಲ್ಕು ವರ್ಣಗಳೆಂದೂ, ವಯಸ್ಸಾ ನಡೆಸಬೇಕಾದ ಕೆಲಸಗಳಿಗಾಗಿ ನಾಲ್ಕು ಆಶ್ರಮಗಳೆಂದೂ ವಿಂಗಡಿಸಿಟ್ಟಿದ್ದಾರೆ. ಜೀವನವು ಕಠಿಣವಾಗದಿರಲಿ, ಪ್ರತಿಯೊಬ್ಬನಿಗೂ ತನ್ನ ಕರ್ತವ್ಯದ ಬಗ್ಗೆ ಪೂರ್ಣ ಜ್ಞಾನವಿರಲಿ, ಪ್ರತಿಯೊಬ್ಬನೂ ತನ್ನ ಯೋಗ್ಯತೆಗನುಸಾರವಾಗಿ ಶ್ರೇಯಸ್ಸನ್ನು ಹೊಂದಲಿ, ಎಂಬುದೇ ಇದರ ಉದ್ದೇಶ. ಪ್ರತಿಯ್ಲೊಂದು ವರ್ಣ ಮತ್ತು ಸಂಕರವರ್ಣಕ್ಕೆ ಒಂದೊಂದು ವೃತ್ತಿ ಮಾಡಬೇಕೆಂಬ ವಿಧಿಯಿಂದ ಅದರಿಂದಲೇ ಆಯಾ ವರ್ಣದವರು ಜೀವನೋಪಾಯ ನಡೆಸಬೇಕೆಂದು ಹೇಳಿದೆ. ಈ ಕ್ರಮದಿಂದ ಎರಡು ವಿಧವಾದ ಸೌಕರ್ಯವಿರುತ್ತದೆ ; ಮೊದಲನೆಯದಾಗಿ ಯಾರೂ ಕೂಡ ಜೀವನಕ್ಕಾಗಿ ವೃತ್ತಿಯನ್ನು ಅರಿಸುತ್ತಾ ಹೋಗಬೇಕಾಗಿಲ್ಲ. ಬಾಲ್ಯದಿಂದಲೂ, ತನ್ನ ತಂದೆಯು ವೃತ್ತಿಯನ್ನು ಮಾಡುತ್ತಿರುವಾಗ ಚೆನ್ನಾಗಿ ಅಭ್ಯಾಸವಾಗಿರುವುದೆ ತಾನು ಇನ್ನೂ ಹೆಚ್ಚಿನ ಕುಶಲತೆಯನ್ನು ಪ್ರದರ್ಶಿಸಲು ಸಾಧ್ಯವಾಗುತ್ತದೆ; ಎರಡನೆಯದಾಗಿ, ಸಮಾಜದಲ್ಲಿ ಜನಸಂಖ್ಯೆ ಹೆಚ್ಚಾದರೂ ಅಥವಾ ಕಡಮೆಯಾದರೂ, ಅದಕ್ಕೆ ತಕ್ಕ ಪ್ರಮಾಣದಲ್ಲಿ ಎಲ್ಲಾ ವೃತ್ತಿಗಳೂ ವೃದ್ಧಿ ಅಥವಾ ಕ್ಷೀಣಗೊಳ್ಳುತ್ತವೆ

ಪುಕ್‌ಗಾಂಡ್ ಅಮೋಘ 4 ನೇ ವಾರ

ಅಮೋಘ ಆರಂಭ

— ಮನೋಹರ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

Jhuk Gaya Aasman

ಜುಕ್ ಗಯಾ ಆಸ್ಮಾನ್

ಪಾತ್ರ — ರಾಜೇಂದ್ರಕುಮಾರ್, ಸೈರಾಬಾನು, ಪ್ರೇಂ ಚೋಪ್ರ, ರಾಜೇಂದ್ರನಾಥ್

ಸಂಗೀತ— ಶಂಕರ್ ಜೈಕಿಷನ್ [ಮಿನರ್ವ ಪ್ರದರ್ಶನಗಳು]

ಅಮೋಘ — ಜನವರಿಯ 3 ನೇ ವಾರ

ಚಿತ್ರಾಕರ್ಷ ಕನ್ನಡ ಚಿತ್ರ

ನವ ಚೂತ

ಪಾತ್ರ : ಉದಯ ಕುಮಾರ್ ಅಶ್ವತ್ಥ್ ದಾಲಕೃಷ್ಣ ಕೃಷ್ಣಕುಮಾರಿ

Golden Jubilee of 'Satyavadi'

The golden jubilee of the 'Satyavadi' is to be celebrated on July 28th.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabha-bhushana Sri F. K. Irani, sri M. B. Basaviah, Sri Madhav Shenoi, Sri Opera Talkies, Padmabhushana Dr. M. C. Modi, Dr. R. S. Nanjunda Swamy (Glasgow) have generously extended donations and best wishes.

It is welknown that golden jubilee of newspapers in India is rare and almost unknown in Mysore state. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

Editor, 'Satyavadi' Chamarajapuram, Mysore 4.

Help The Gorakshana

ಗೋರಕ್ಷಣೆಗೆ ಬೆಂಬಲ ನೀಡಿ

ಶ್ರೀರಾಜ್ಯಶ್ರೀ ಜಗದ್ಗುರು ಡಾಯಾಸಾಮ್ರಾಜ್ಯಮಿಗಳವರು ಶ್ರೀ ದ್ವಾರಕಾಪೀಠ ಜಗದ್ಗುರು ಮಹಾರಾಷ್ಟ್ರಮಿಗಳವರ ಅಜ್ಞಾನುಸಾರ ಅಸಹಕಾರ ಕೃಷಿಯಾಗಿರುವ ಕರ್ನಾಟಕದಲ್ಲಿ ಗೋಹತ್ಯೆಯ ದುಷ್ಕೃತ್ಯವನ್ನು, ಕಾನೂನಿನಿಂದ, ಪರಿಹಾರಗಳ ಏರ್ಪಾಟು ಮಾಡುವಂತೆ ಮಾಡಲು : ವಾರ್ಷಿಕ ಚಂದಾ 50 ಪೈಸೆ

— ಹೊರದೇಶದ ಸದಸ್ಯತ್ವಕ್ಕಾಗಿ ವಿನಂತಿ —

ಗೋರಕ್ಷಣೆಗೆ ಬೇಕಾಗುವಷ್ಟು ಪ್ರೋತ್ಸಾಹ ಧನವನ್ನೂ ದಾನವಾಗಿ ಕೊಡುವಂತೆ ಶ್ರೀಮಂತರಲ್ಲಿ ವಿನಂತಿ

ಹಣವನ್ನು ಕಳಿಸಬೇಕಾದ ವಿಳಾಸ ಇವರಲ್ಲಿ ಚಂದಾ ವಸೂಲು ಮಾಡಬೇಕಾಗಿ ವಿನಂತಿ

ಶ್ರೀ ಕೆ ಎಸ್ ನಾರಾಯಣಾಚಾರ್, ಶ್ರೀ ಹಿಎಸ್ ವಿಶ್ವನಾಥ್ ಜಯನಗರ, ಬೆಂಗಳೂರು

ಶ್ರೀ ಆರ್. ಕೆ. ಶಾಸ್ತ್ರಿಗಳು, 1030 ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಆನಂತನರಸಿಂಹಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಸಮಠ ರಸ್ತೆ

ಗೋಹತ್ಯೆಯ ಅಕ್ರಮವು ಸತ್ಯವಾದಿ ಪ್ರೆಸ್ ಚಾಮರಾಜಪುರಂ ಮೈಸೂರು 4

ವಿಳಾಸ — ಗೋರಕ್ಷಣ ಅಭಿಯಾನ 1067 ಚಾಮರಾಜಪುರಂ, ಮೈಸೂರು.



Cow Slaughter should be banned Immediately.

.....

ಗೋವಧೆ ಕೂಡಲೆ ನಿಷೇಧವಾಗಲಿ

Protect the Cow

★

ಗೋವನ್ನು ಕೊಲ್ಲುವ ಪಾಪಕೃತ್ಯವನ್ನು ಕೂಡಲೆ ನಿಲ್ಲಿಸಿ ಸಹಕರಿಸಿರಿ

Edited, Printed & Published by Dharmapracharo Nisate M S Krishna Rao (Proprietor) at the Satyavadi-Press Chamarajapuram, Mysore-4